ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕರ್ನಾಟಕ ಬಾಲವಿಕಾಸ ಅಕಾಡಮಿಯು ಮಕ್ಕಳ ಆರೋಗ್ಯ ರಕ್ಷಣೆ, ಪೋಷಣೆ ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದಂತೆ 2009-10 ನೇ ಸಾಲಿನಲ್ಲಿ ಸಾಧಿಸಿದ ಪ್ರಗತಿ ವರದಿ.

---

ಮಾನ್ಯ ಮುಖ್ಯ ಮಂತ್ರಿಗಳು ಜನೇವರಿ 24, 2009 ರಂದು ಧಾರವಾಡದಲ್ಲಿ ಕರ್ನಾಟಕ ಬಾಲವಿಕಾಸ ಅಕಾಡೆಮಿಯನ್ನು ಉದ್ಘಾಟನೆ ಮಾಡಿ ಅಕಾಡೆಮಿಗೆ ಚಾಲನೆ ನೀಡಿದರು. ಮಾನ್ಯ ಶ್ರೀ ಶಂಕರ ಹಲಗತ್ತಿಯವರು ಅಕಾಡೆಮಿಯ ಮೊದಲ ಅಧ್ಯಕ್ಷರಾಗಿರುತ್ತಾರೆ. ಡಾ. ಡಿ.ಎಸ್. ಅಶ್ವಥ ಭಾ.ಅ.ಸೇ. ಪ್ರಧಾನ ಕಾರ್ಯದರ್ಶಿಗಳು ಮ.ಮ.ಅ.ಇ. ಬೆಂಗಳೂರು ಶ್ರೀಮತಿ ಶಮ್ಲಾ ಇಕ್ಬಾಲ್ ಭಾ.ಅ.ಸೇ. ನಿರ್ದೇಶಕರು ಮ.ಮ.ಅ.ಇ. ಬೆಂಗಳೂರು, ಪದ ನಿಮಿತ್ತ ಸದಸ್ಯರಾಗಿರುತ್ತಾರೆ. ಶ್ರೀಮತಿ ರತ್ನ ಹಾಲಪ್ಪ ಗೌಡರ ಮೈಸೂರ, ಶ್ರೀಮತಿ ಅನ್ನಪೂರ್ಣ ಶಿವಮೊಗ್ಗ, ಶ್ರೀಮತಿ ಲೀಲಾವತಿ ಕುಲಕರ್ಣಿ ಗುಲ್ಬರ್ಗಾ, ಶ್ರೀ ನಿಂಗು ಸೊಲಗಿ ಮುಂಡರಗಿ ಇವರನ್ನು ಸದಸ್ಯರನ್ನಾಗಿ ಸರ್ಕಾರವು ನೇಮಕಮಾಡಿದೆ. ಆಕಾಡೆಮಿಯು ಕಾರ್ಯನಿರ್ವಹಿಸಲು ಅನೂಕೂಲವಾಗುವಂತೆ ಯೋಜನಾಧಿಕಾರಿ, ಆರ್ಥಿಕ ಸಲಹೆಗಾರರು,ಅಧೀಕ್ಷಕರು, ಲೆಕ್ಕಾಧೀಕ್ಷಕರು, ಪ್ರ.ದ.ಸ. ಆಪ್ತ ಸಹಾಯಕರ ಎರಡು ಹುದ್ದೆ, ಶೀಘ್ರಲೀಪಿಗಾರರು, ದ್ವಿ.ದ.ಸ., ಒಂದು ವಾಹನ ಚಾಲಕ ಮತ್ತು ಒಂದು ಜವಾನ ಹುದ್ದೆಗಳನ್ನು ಮಂಜೂರ ಮಾಡಿದೆ. ಅಕಾಡೆಮಿಗೆ ಸರಕಾರದಿಂದ ಅನುದಾನ ರೂ. 1.00 ಕೋಟಿ ಮಂಜುರಾಗಿದ್ದು ಇದರಲ್ಲಿ ಮಕ್ಕಳಿಗೆ ಅರ್ಥಪೂರ್ಣವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನ ತರುವಲ್ಲಿ ಯಶಸ್ವಿ ಹೆಜ್ಜೆಯನ್ನಿಡುತ್ತಿದೆ.

ಅಕಾಡೆಮಿಯ ಉದ್ದೇಶಗಳು :

- ಶಿಕ್ಷಣ, ಸಾಹಿತ್ಯ, ಸಂಗೀತ ಹಾಗೂ ಕಲೆಯು ಸೇರಿದಂತೆ ಮಕ್ಕಳ ಸರ್ವತೋಮುಖ ಬೆಳವಣಿಗೆ ಹಾಗೂ ಅಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ಮುಖ್ಯವಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ, ಹಿಂದುಳಿದ ಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡು ಕಾರ್ಯಕ್ರಮ ರೂಪಿಸುವುದು. ಸಂಗೀತ, ಸಾಹಿತ್ಯ ಕಲೆ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಮಕ್ಕಳಲ್ಲಿ ಹುದುಗಿರುವ ಪ್ರತಿಭೆಗಳನ್ನು ಗುರುತಿಸುವುದು.

- ಮಕ್ಕಳ ಸಮಸ್ಯೆಗಳಿಗೆ ಮಕ್ಕಳೇ ಪರಿಹಾರ ಕಂಡುಕೊಳ್ಳಲು ಕಾರ್ಯಕ್ರಮಗಳನ್ನು ರೂಪಿಸುವುದು.

- ಕ್ರೀಡೆ, ಸಾಹಿತ್ಯ ಸಾಂಸ್ಕೃತಿಕ ಹಾಗೂ ಮುಂತಾದ ಕ್ಷೇತ್ರಗಳಲ್ಲಿ ಮಕ್ಕಳ ಪ್ರತಿಭೆಗಳನ್ನು ಗುರುತಿಸಲು ಹಾಗೂ ಅವುಗಳನ್ನು ಸಮಾಜಕ್ಕೆ ಪರಿಚಯಿಸಲು ಮಕ್ಕಳ ಆರೋಗ್ಯ ರಕ್ಷಣೆ, ಪೋಷಣೆ ಮತ್ತು ಶಿಕ್ಷಣ ಕ್ಷೇತ್ರಗಳ ಬಗ್ಗೆ ಗಮನ ಹರಿಸಿ ನೂತನ ಅವಿಷ್ಕಾರಗಳು, ಸಂಶೋಧನೆಗಳು ಹಾಗೂ ವಿವಿಧ ತರಬೇತಿ ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ಮಕ್ಕಳ ಸ್ಥಿತಿಗತಿಗಳನ್ನು ಸುಧಾರಿಸುವುದು.

- ಮಕ್ಕಳ ಮನಸ್ಸು ಅರಳಿಸುವ ಮೌಲ್ಯಯುಕ್ತ ಮಕ್ಕಳ ಸಾಹಿತ್ಯ ರಚನೆಯಾಗುವಂತೆ ಮತ್ತು ಅದು ಮಕ್ಕಳ ಕೈಗೆ ತಲುಪುವಂತೆ ಮಾಡುವುದು.

- ಗ್ರಾಮೀಣ ಮಕ್ಕಳ ಮನೋವಿಕಾಸಗೊಳಿಸುವ ಮತ್ತು ಆತ್ಮಸ್ಥೈರ್ಯ ತುಂಬುವ ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸುವುದು.

- 2009-10 ನೇ ಸಾಲಿಗೆ ಸರಕಾರವು ಅಕಾಡೆಮಿಗೆ 1 ಕೋಟಿ ಅನುದಾನಕ್ಕೆ ಮಂಜೂರಾತಿ ನೀಡಿದ್ದು, ಇದರಲ್ಲಿ 50 ಲಕ್ಷ ರೂ.ಗಳನ್ನು ಬಿಡುಗಡೆಗೊಳಿಸಿದೆ.

- ಅಕಾಡೆಮಿಯು ಆಡಳಿತ ಕಚೇರಿಗಾಗಿ ಲಕಮನಹಳ್ಳಿ ಗ್ರಾಮದ ಸರ್ವೆ ನಂ. 15/2/1/ಬ ಮತ್ತು 15/2/2 ನೇದ್ದರಲ್ಲಿ 1 ಎಕರೆ ಜಾಗೆಯನ್ನು ಹುಬ್ಬಳ್ಳಿ ಧಾರವಾಡ ಪ್ರಾಧಿಕಾರದಿಂದ ಪಡೆದಿದೆ.

ಅಕಾಡೆಮಿಯ ಸಾಧನೆಗಳ ವಿವರ :

1. ಸರ್ಕಾರವು ಬಿಡುಗಡೆಮಾಡಿದ ಒಟ್ಟು ಅನುದಾನ ರೂ. 50.00 ಲಕ್ಷದಲ್ಲಿ ಜನೇವರಿ 2010 ರವರೆಗೆ ವಾರ್ಷಿಕ ಕ್ರಿಯಾಯೋಜನೆಯ ಕಾರ್ಯಕ್ರಮಗಳಿಗಾಗಿ ರೂ. 25.43 ಲಕ್ಷ ಹಾಗೂ ಆಡಳಿತ, ಸಿಬ್ಬಂದಿ, ಕಚೇರಿ ವೆಚ್ಚಕ್ಕಾಗಿ ರೂ.21.74 ಲಕ್ಷ ಅನುದಾನವನ್ನು ಉಪಯೋಗಿಸಲಾಗಿದೆ.
2. ಕರ್ನಾಟಕ ಬಾಲವಿಕಾಸ ಅಕಾಡೆಮಿಯ ರೂಪರೇಷೆಗಳನ್ನು (ಬೈಲಾಸ್) ಸರಕಾರವು ಬಿಡುಗಡೆಗೊಳಸಿದೆ. ಅಕಾಡೆಮಿಯು ವಿವಿಧ ಸಮಿತಿಗಳನ್ನು ಸಹ ಹೊಂದಿದೆ.
3. ಮಕ್ಕಳಲ್ಲಿ ಪರಿಸರ ಪ್ರಜ್ಞೆ ಮೂಡಿಸುವಲ್ಲಿ ಶ್ರೀ ಸುರೇಶ ಹೆಬ್ಳಿಕರ ಸಮ್ಮುಖದೊಂದಿಗೆ 7000 ಮಕ್ಕಳಿಗೆ ರಾಮದುರ್ಗದಲ್ಲಿ ದಿನಾಂಕ : 27-6-2009 ರಂದು ಮತ್ತು ಹಳಿಯಾಳ (ಉ.ಕ)ದಲ್ಲಿ 28-6-2009 ರಂದು 5000 ಮಕ್ಕಳಿಗೆ ಪರಿಸರ ಜಾಗೃತಿ ದಿನಾಚರಣೆಯನ್ನು, ಎರಡು ಸಾವಿರ ಸಸಿಗಳನ್ನು ಮಕ್ಕಳು ನೆಡುವ ಮೂಲಕ ನೆರವೇರಿಸಲಾಗಿದೆ.
4. ತುಮಕೂರಿನ ಕಾಡಶೆಟ್ಟಿ ಹಳ್ಳಿಯಲ್ಲಿ ಮಕ್ಕಳ ನಾಟಕಗಳ ವಿಚಾರ ಸಂಕಿರಣ ಮತ್ತು ಮಕ್ಕಳ ನಾಟಕ ಪ್ರದರ್ಶನವು ದಿ: 6-7-2009 ರಂದು ನಡೆಸಲಾಗಿದೆ.
5. ವಿಶ್ವ ವಿಕಲಚೇತನ ಮಕ್ಕಳ ದಿನಾಚರಣೆಗೆ ಅಕಾಡೆಮಿಯ ವತಿಯಿಂದ 10,000/-ರೂ.ಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಮಕ್ಕಳಿಗಾಗಿ ಬಹುಮಾನ ಕೊಡುವುದರ ಮೂಲಕ ಮಕ್ಕಳನ್ನು ಪ್ರೋತ್ಸಾಹಿಸಿತು.

## ಕಾರ್ಯಕ್ರಮದ ಚಿತ್ರಣ



6. ಮಕ್ಕಳ ಕಥಾ ರಚನಾ ಕಮ್ಮಟ ಕೂಡಲಸಂಗಮದಲ್ಲಿ ದಿ : 13-10-2009 ರಿಂದ 15-10-2009 ರ ವರೆಗೆ ಮೂರು ದಿನಗಳ ಕಾಲ ಜರುಗಿತು. ಈ ಕಮ್ಮಟದಲ್ಲಿ 50 ಜನ ಶಿಬಿರಾರ್ಥಿಗಳು, 16 ಜನ ಸಂಪನ್ಮೂಲ ವ್ಯಕ್ತಿಗಳಿಂದ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ನೇತೃತ್ವದಲ್ಲಿ ಮಕ್ಕಳ ಕಥೆ, ಕವಿತೆ ಹಾಗೂ ಮಕ್ಕಳಿಗೆ ಕಥೆ ಹೇಳುವ ಕೌಶಲ್ಯ ಕಮ್ಮಟವನ್ನು ಯಶಸ್ವಿಯಾಗಿ ನೆರವೇರಿಸಲಾಯಿತು.

## ಕಾರ್ಯಕ್ರಮದ ಪಕ್ಷಿ ನೋಟ



ಬಾಲವಿಕಾಸ ವಾರ್ತೆಗಳು

ಮಕ್ಕಳ ಕಥಾಕಮ್ಮಟ

ವರದಿ :
ರವಿ ಸೋ. ದೇವರಡ್ಡಿ
ಮುಂಡರಗಿ

ಮಕ್ಕಳ ಕಥಾ ಪ್ರಪಂಚದ ವಿಸ್ತಾರವನ್ನು, ಮಕ್ಕಳಿಗಾಗಿ ಕಥೆಗಳನ್ನು ರಚಿಸುತ್ತಿರುವ ನಾಡಿನ ಯುವಬರಹಗಾರರಿಗೆ, ಪರಿಚಯಿಸುವ ತನ್ಮೂಲಕ ಅವರ ಬರವಣಿಗೆಗೆ ಹೊಸ ಮೊನಚನ್ನು ನೀಡುವ ಪ್ರಯತ್ನವಾಗಿ ಕೂಡಲಸಂಗಮದಲ್ಲಿ 13,14 ಹಾಗೂ 15ನೆಯ ಅಕ್ಟೋಬರ್ 2009 ರಂದು ಅಕಾಡೆಮಿ ಮಕ್ಕಳ ಕಥಾ ಕಮ್ಮಟವನ್ನು ಹಮ್ಮಿಕೊಂಡಿತ್ತು. ಹಿರಿಯ ಸಾಹಿತಿಗಳು ಈ ಕಮ್ಮಟದಲ್ಲಿ ಭಾಗವಹಿಸಿ ಕಿರಿಯರಿಗೆ ಅನುಭವವನ್ನು ಧಾರೆ ಎರೆದರು. ಈ ಕಮ್ಮಟದ ಒಟ್ಟು ಚಟುವಟಿಕೆಗಳ ಸಂಕ್ಷಿಪ್ತ ನೋಟ ಇಲ್ಲಿದೆ.

7. ಹಂಪಿಯಲ್ಲಿ ದಿನಾಂಕ : 7, 8, 9 ರಂದು ನವ್ಹೆಂಬರ್ 2009 ರಂದು ಮಕ್ಕಳ ಕಾವ್ಯ ರಚನಾ ಕಮ್ಮಟವನ್ನು ಏರ್ಪಡಿಸಲಾಯಿತು. 40 ಜನ ಶಿಬಿರಾರ್ಥಿಗಳು, 10 ಜನ ಸಂಪನ್ಮೂಲ ವ್ಯಕ್ತಿಗಳಿಂದ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ನೇತೃತ್ವದಲ್ಲಿ ಮಕ್ಕಳ ಕಾವ್ಯ ರಚನಾ ಕಮ್ಮಟವನ್ನು ಯಶಸ್ವಿಯಾಗಿ ನೆರವೇರಿಸಲಾಯಿತು.

8. ಮಕ್ಕಳ ದಿನಾಚರಣೆ ಅಂಗವಾಗಿ ದಿನಾಂಕ : 14–11–2009 ರಂದು ಕರ್ನಾಟಕ ಬಾಲವಿಕಾಸ ಅಕಾಡೆಮಿಯವತಿಯಿಂದ ಟೆಲಿಕಾನ್ಫರೆನ್ಸ್‌ನ್ನು ಬೆಂಗಳೂರಿನ ಡಿ.ಎಸ್.ಇ.ಆರ್.ಟಿ. ಸ್ಟುಡಿಯೋದಲ್ಲಿ ಯಶಸ್ವಿಯಾಗಿ ನೆರವೇರಿಸಲಾಯಿತು.

9. ದಿನಾಂಕ : 18, 19, 20 ರಂದು ಡಿಸೆಂಬರ್ 2009 ರಂದು ಮೂರು ದಿನಗಳ ಕಾಲ ತೋಂಟದಾರ್ಯ ಮಠ ಗದಗದಲ್ಲಿ ಮಕ್ಕಳಿಗೆ ಕಥೆ ಹೇಳುವ ಕೌಶಲ್ಯ ಕಮ್ಮಟವನ್ನು ಹಮ್ಮಿಕೊಳ್ಳಲಾಯಿತು. ಈ ಕಮ್ಮಟದಲ್ಲಿ 40 ಜನ ಶಿಬಿರಾರ್ಥಿಗಳು, 10 ಜನ ಸಂಪನ್ಮೂಲ ವ್ಯಕ್ತಿಗಳಿಂದ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರ ನೇತೃತ್ವದಲ್ಲಿ ಮಕ್ಕಳ ಕಥೆ, ಕವಿತೆ ಹಾಗೂ ಮಕ್ಕಳಿಗೆ ಕಥೆ ಹೇಳುವ ಕೌಶಲ್ಯ ಕಮ್ಮಟವನ್ನು ಮಕ್ಕಳ ಸಮ್ಮುಖದಲ್ಲಿ ಯಶಸ್ವಿಯಾಗಿ ನೆರವೇರಿಸಲಾಯಿತು.

10. ರಾಜ್ಯದ 35 ತಾಲೂಕಗಳಲ್ಲಿ ಏಕಕಾಲಕ್ಕೆ ಕಥಾ ಸಂಚಾರ ಪ್ರಾರಂಭಿಸಲು ಉದ್ದೇಶಿಸಿ, ಕಥಾ ಸಂಚಾರ ಉದ್ಘಾಟನೆಯನ್ನು ಪಂಚತಂತ್ರ ಕಥೆಗಳ ಜನಕ, ದುರ್ಗಸಿಂಹನ ಸವಡಿ ಊರಿನಿಂದ 2000 ಮಕ್ಕಳ ಮುಂದೆ ಪ್ರಾರಂಭಿಸಿತು. ಇದಕ್ಕಾಗಿ ಒಟ್ಟು 38 ಕಥಾ ಸಂಚಾರದ ಕಥೆಗಾರರನ್ನು ನೇಮಕ ಮಾಡಿ ದಿನಾಂಕ 12–1–2010 ರಿಂದ 10–2–2010 ರವರೆಗೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ. 20 ಜನ ಕಥೆಗಾರರಿಂದ ಬಿಜಾಪೂರ, ಬಳ್ಳಾರಿ, ಗದಗ, ಬೆಳಗಾಂವಿ, ಧಾರವಾಡ, ದಾವಣಗೇರಿ, ಹಾವೇರಿ, ಬಾಗಲಕೋಟ, ಬೀದರ, ಗುಲಬರ್ಗಾ, ಉತ್ತರ ಕನ್ನಡ, ಹಾಸನ, ಮಂಡ್ಯ ಜಿಲ್ಲೆಗಳಲ್ಲಿ, ಪ್ರತಿ ಜಿಲ್ಲೆಯ 20 ಹಳ್ಳಿಗಳಲ್ಲಿ ವಸತಿ ಶಾಲೆ, ನವೋದಯ ಶಾಲೆ, ಪ್ರಾಥಮಿಕ ಶಾಲೆಗಳಲ್ಲಿ ಕಥೆ ಹೇಳುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

### ಕಥಾ ಸಂಚಾರದ ಉದ್ಘಾಟನೆ ಕಾರ್ಯಕ್ರಮದ ಚಿತ್ರಣ



ಬಳ್ಳಾರಿ ಜಿಲ್ಲೆಯ ಡೊಂಬರಹಳ್ಳಿ ತಾಂಡಾದಲ್ಲಿ  ಮಕ್ಕಳ ಕಥಾ ಸಂಚಾರ ಕಾರ್ಯಕ್ರಮದ ಪಕ್ಷಿನೋಟ



11. ದಿನಾಂಕ : 23, 24 ಜನೇವರಿ 2010 ರಂದು ಎರಡು ದಿನಗಳ ಕಾಲ ಧಾರವಾಡದಲ್ಲಿ ಮಕ್ಕಳ ನಾಟಕ ನಿರ್ದೇಶಕರಿಗೆ ಕಮ್ಮಟವನ್ನು ಏರ್ಪಡಿಸಲಾಗಿತ್ತು. ಇದರಲ್ಲಿ 25 ಜನ ನಿರ್ದೇಶಕರು ಹಾಗೂ 5 ಜನ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ನೀಡಲಾಯಿತು.

12. ದಿನಾಂಕ : 28–1–2010 ರಿಂದ 4–2–2010 ರ ವರೆಗೆ ಅಕಾಡೆಮಿಯ ವಾರ್ಷಿಕೋತ್ಸವ ಅಂಗವಾಗಿ ಮಕ್ಕಳಿಗಾಗಿ ವಿವಿಧ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು. ವಿವರ ಈ ಕೆಳಗಿನಂತಿದೆ.

    1. ದಿನಾಂಕ: 28, 29 ಮತ್ತು 30 ರಂದು ಮಕ್ಕಳ ಅಂತರ ರಾಷ್ಟ್ರೀಯ ಚಲನ ಚಿತ್ರೋತ್ಸವವನ್ನು ಏರ್ಪಡಿಸಲಾಗಿತ್ತು. ಇದನ್ನು ಎರಡು ಚಿತ್ರಮಂದಿರಗಳಲ್ಲಿ ಆರು ಮಕ್ಕಳ ಚಲನ ಚಿತ್ರಗಳನ್ನು ಉಚಿತವಾಗಿ ಮೂರು ದಿನಗಳ ಕಾಲ ಮಕ್ಕಳಿಗೆ ತೋರಿಸಲಾಯಿತು.
    2. ದಿನಾಂಕ : 31–1–2010 ರಂದು ಗ್ರಾಮೀಣ ಮಕ್ಕಳ ಕ್ರೀಡಾಕೂಟ ಏರ್ಪಡಿಸಲಾಗಿತ್ತು. ಈ ಮಕ್ಕಳಿಗಾಗಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ಮಕ್ಕಳ ಮನೋವಿಕಾಸಕ್ಕಾಗಿ ಪ್ರೋತ್ಸಾಹವಾಗಿ ಬಹುಮಾನಗಳನ್ನು ವಿತರಿಸಿತು.



3. ದಿನಾಂಕ : 2–2–2010 ರಂದು ಧಾರವಾಡದ ಕಲಾಭವನದಲ್ಲಿ ಬಾಲೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಮಾನ್ಯ ಸಚಿವರುಗಳು ಸಾಹಿತಿಗಳು, ಕವಿಗಳು ಹಾಗೂ ವಿವಿಧ ಜಿಲ್ಲೆಗಳಿಂದ ಸುಮಾರು 1500 ಕ್ಕೂ ಹೆಚ್ಚು ಮಕ್ಕಳು ಭಾಗವಹಿಸುವಂತೆ ಮಾಡಿ, ಕಡಪಾ ಮೈದಾನದಿಂದ ಶಹರದ ವಿವಿಧಕಡೆಗಳಲ್ಲಿ ಉತ್ಸವ ನಡುಗೆ ಮೂಲಕ ಸಾರ್ವಜನಿಕರ ಗಮನ ಸೆಳೆಯಲಾಯಿತು. ನಂತರ ಕಲಾಭವನದಲ್ಲಿ ರಾಜ್ಯದ 15 ಜಿಲ್ಲೆಗಳ ಪ್ರತಿಭಾ ಕಾರಂಜಿಯಲ್ಲಿ ಶ್ರೇಷ್ಠ ಪ್ರಶಸ್ತಿ ಪಡೆದ 15 ಮಕ್ಕಳಿಂದ ಹಾಗೂ ಅತಿಥಿಗಳಿಂದ ಚಿತ್ರಕಲೆಯ ಚಿತ್ರೋತ್ಸವವನ್ನು ಜರುಗಿಸಲಾಯಿತು. ನೃತ್ಯ ಹಾಗೂ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಕ್ಕಳಿಗಾಗಿ ಮಕ್ಕಳಿಂದ ನಡೆಸಲಾಯಿತು. ರಾಜ್ಯಮಟ್ಟದ ಹೊನಲು ಬೆಳಕಿನ ಖೋ ಖೋ ಪಂದ್ಯಾವಳಿಯನ್ನು ಹಮ್ಮಿಕೊಳ್ಳಲಾಗಿತ್ತು. ವಿವಿಧ ಜಿಲ್ಲೆಗಳಿಂದ 15 ತಂಡಗಳು ಭಾಗವಹಿಸಿ ಎರಡು ದಿನಗಳ ಕಾಲ ಪಂದ್ಯಾವಳಿ ನಡೆಸಲಾಯಿತು.
4. ಬಾಲವಿಕಾಸ ಅಕಾಡೆಮಿಯ ಮಾಹಿತಿಯನ್ನೊಳಗೊಂಡ ಪೋಸ್ಟರ್, ಬ್ರೋಚರ್, ಮತ್ತು ತ್ರೈಮಾಸಿಕ ಪತ್ರಿಕೆಗಳನ್ನು ಮುದ್ರಿಸಿ ಸಾರ್ವಜನಿಕರಿಗೆ ಮಾಹಿತಿಗಾಗಿ ಪ್ರಚುರ ಪಡಿಸಲಾಗುತ್ತಿದೆ.










## 13. ಅಧ್ಯಯನ ಪ್ರವಾಸ

ಅಕಾಡೆಮಿಯ ಯೋಜನೆ ಅನುಸಾರವಾಗಿ ಮಾನ್ಯ ಅಧ್ಯಕ್ಷರು ಹಾಗೂ ಸದಸ್ಯರನ್ನೊಳಗೊಂಡು 7 ಜನರ ತಂಡವು ದಿ. 23–2–2010 ರಿಂದ 28–2–2010 ರವರೆಗೆ ಕೇರಳ ರಾಜ್ಯದಲ್ಲಿ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಮಕ್ಕಳ ಕೇಂದ್ರಗಳ ಅಧ್ಯಯನ ಪ್ರವಾಸ ಕೈಗೊಂಡಿತ್ತು. ಕೇರಳ ರಾಜ್ಯದಲ್ಲಿ ಮಕ್ಕಳ ಬೌದ್ಧಿಕ ವಿಕಸನಕ್ಕೆ ಸಂಬಂಧಿಸಿದಂತೆ ಹತ್ತು ಹಲವು ಕಾರ್ಯಕ್ರಮಗಳನ್ನು ನಡೆಸುತ್ತಿರುವುದುನ್ನು ತಂಡವು ಗಮನಿಸಿತು. ಮಕ್ಕಳ ಮ್ಯೂಜಿಯಂ ಹಳ್ಳಗೊಂದು ಮಕ್ಕಳ ವಿಕಸನ ಕೇಂದ್ರ ಅಮ್ಮನ ಮಡಿಲು ಬುದ್ಧಿಮಾಂದ್ಯ ಮಕ್ಕಳ ತರಬೇತಿ ಕೇಂದ್ರಗಳು ತುಂಬಾ ವಿಶಿಷ್ಟವಾದವುಗಳಾಗಿರುವುದನ್ನು ಅಧ್ಯಯನ ತಂಡ ಗಮನಿಸಿ ಅಂತಹ ಯೋಜನೆಗಳನ್ನು ಕರ್ನಾಟಕದ ಮಕ್ಕಳಿಗೂ ದೊರಕುವಂತೆ ಆಗಬೇಕೆಂದು ವರದಿ ನೀಡಿದೆ. ಈ ವರದಿಯನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ.

14. ಸೃಜನೋತ್ಸವ ಕಾರ್ಯಕ್ರಮ

ದಿ. 17 ರಿಂದ 20 ಫೆಬ್ರುವರಿ 2010 ರವರೆಗೆ 4 ದಿನಗಳ ಕಾಲ ದಾವಣಗೇರಿಯಲ್ಲಿ ಸೃಜನೋತ್ಸವ ಕಾರ್ಯಕ್ರಮ ನಡೆಸಲಾಯಿತು. ಇದರಲ್ಲಿ 150 ಬಾಲಮಂದಿರದ ಮಕ್ಕಳು, 150 ಸ್ಥಳೀಯ ಮಕ್ಕಳು ಭಾಗವಹಿಸಿದ್ದರು. ಇದರಲ್ಲಿ ನಾಟಕ, ಕಲೆ, ಹಾಡು, ನೃತ್ಯ, ಚಿತ್ರಕಲೆ, ಕರಕುಶಲತೆ ವೈಜ್ಞಾನಿಕ ಹಾಗೂ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ಪ್ರತಿಭೆಗಳನ್ನು ಗುರುತಿಸುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡು ಯಶಸ್ವಿಯಾಗಿ ಸೃಜನೋತ್ಸವ ಕಾರ್ಯಕ್ರಮ ನಡೆಸಲಾಯಿತು.





15. ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳು :

1. ಗುಲಬರ್ಗಾ ಜಿಲ್ಲೆಯ ದಿನಾಂಕ : 15–2–2010 ರಿಂದಾ 18–2–2010 ರವರೆಗೆ ಅತ್ಯಂತ ಹಿಂದುಳಿದ ಪ್ರದೇಶದ ಗ್ರಾಮೀಣ ಪ್ರಾಥಮಿಕ ಶಾಲಾ ಮಕ್ಕಳ ವ್ಯಕ್ತಿತ್ವ ವಿಕಸನ ಶಿಬಿರವನ್ನು 100 ಮಕ್ಕಳಿಗೆ ನಾಲ್ಕು ದಿನಗಳ ಕಾಲ ವ್ಯಕ್ತಿತ್ವ ವಿಕಸನ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಿತು. ಅಕಾಡೆಮಿ ಅಧ್ಯಕ್ಷರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಮಕ್ಕಳ ಶಿಕ್ಷಣದ ಜೊತೆಗೆ ಸಾಹಿತ್ಯ, ಕ್ರೀಡೆ, ಕಲೆ, ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಕ್ಕಳ ಪ್ರತಿಭೆ ಗುರುತಿಸಿ ಆಂತರಿಕ ಪ್ರತಿಭೆ ಸಮಾಜಕ್ಕೆ ಪರಿಚಯಿಸಿ ಪ್ರೋತ್ಸಾಹಿಸುವ ಅತ್ಯಂತ ಉಪಯುಕ್ತವಾದ ಹಾಗೂ ಗ್ರಾಮೀಣ ಮಕ್ಕಳಿಗೆ ಒಂದು ಹೊಸ ಹೆಜ್ಜೆಯನ್ನು ಗುರುತಿಸುವಂತಹ ಈ ಕಾರ್ಯಕ್ರಮ ಯಶಸ್ವಿಯಾಗಿ ನೆರವೆೇರಿಸಲಾಯಿತು.





2. ಬೀದರ ಜಿಲ್ಲೆಯಲ್ಲಿ ದಿ. 13–2–2010 ರಿಂದಾ 16–2–2010 ರವರೆಗೆ ಅತ್ಯಂತ ಹಿಂದುಳಿದ ಪ್ರದೇಶದ ಗ್ರಾಮೀಣ ಪ್ರಾಥಮಿಕ ಶಾಲಾ ಮಕ್ಕಳ ವ್ಯಕ್ತಿತ್ವ ವಿಕಸನ ಶಿಬಿರವನ್ನು 100 ಮಕ್ಕಳಿಗೆ ನಾಲ್ಕು ದಿನಗಳ ಕಾಲ ವ್ಯಕ್ತಿತ್ವ ವಿಕಸನ ಕಾರ್ಯಕ್ರಮವನ್ನ ಎಮ್. ಎಸ್. ಕ್ಯಾಂಪಸ್‌ನಲ್ಲಿ ಯಶಸ್ವಿಯಾಗಿ ನೆರವೇರಿಸಿತು. ಅಕಾಡೆಮಿ ಅಧ್ಯಕ್ಷರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಮಕ್ಕಳ ಶಿಕ್ಷಣದ ಜೊತೆಗೆ ಸಾಹಿತ್ಯ, ಕ್ರೀಡೆ, ಕಲೆ, ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಕ್ಕಳ ಪ್ರತಿಭೆ ಗುರುತಿಸಿ ಆಂತರಿಕ ಪ್ರತಿಭೆ ಸಮಾಜಕ್ಕೆ ಪರಿಚಯಿಸಿ ಪ್ರೋತ್ಸಾಹಿಸುವ ಅತ್ಯಂತ ಉಪಯುಕ್ತವಾದ ಗ್ರಾಮೀಣ ಮಕ್ಕಳಿಗೆ ಒಂದು ಹೊಸ ಹೆಜ್ಜೆಯನ್ನು ಗುರುತಿಸುವಂತಹ ಈ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.




3. ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಮಂಡ್ಯ ಜಿಲ್ಲೆಯ ಅತ್ಯಂತ ಹಿಂದುಳಿದ ಪ್ರದೇಶದ ಶೈಕ್ಷಣಿಕವಾಗಿ ತುಂಬಾ ಹಿಂದುಳಿದ 6 ನೇ ತರಗತಿಯಲ್ಲಿ ಓದುತ್ತಿರುವ 7 ತಾಲೂಕಿನ 100 ಮಕ್ಕಳಿಗೆ ಅರಳು ಮನಸ್ಸು ಎಂಬ ಮಕ್ಕಳ ವ್ಯಕ್ತಿತ್ವ ಶಿಬಿರವನ್ನು ದಿನಾಂಕ. 19 ರಿಂದ 22 ಫೆಬ್ರುವರಿ 2010 ರವರೆಗೆ 4 ದಿನಗಳ ಕಾಲ ಅತ್ಯಂತ ಯಶಸ್ವಿಯಾಗಿ ನೆರವೇರಿಸಲಾಯಿತು. ಮಕ್ಕಳನ್ನು ಜಗುಲಿಯಿಂದ ಜಗತ್ತಿನೆಡೆಗೆ ಕೊಂಡೊಯ್ಯುವ ಪ್ರಯತ್ನ ನಡೆಸಲಾಯಿತು.





16. ನಾಟಕೋತ್ಸವ : (ನಾಟಕ ಸಂಚಾರ) ಕರ್ನಾಟಕ ಬಾಲವಿಕಾಸ ಅಕಾಡೆಮಿಯಿಂದ ನಾಟಕ ನಿರ್ದೇಶಕರಿಗೆ ಎರಡು ದಿನಗಳ ಕಾರ್ಯಾಗಾರ & ಹದಿನೈದು ದಿನಗಳ ಮಕ್ಕಳ ನಾಟಕ ರಂಗ ಶಿಬಿರ, 6 ದಿನಗಳ ಕಾಲ, 6 ಹಳ್ಳಿಗಳಲ್ಲಿ ಮಕ್ಕಳ ನಾಟಕ ಶಿಬಿರವನ್ನ ನಡೆಸಲಾಗಿದ್ದು, ಇದರ ಆಧಾರದ ಮೇಲೆ ರಾಜ್ಯಾದಾದ್ಯಂತ ಹಿಂದುಳಿದ ಸರಕಾರಿ ಶಾಲೆಯೊಂದರಲ್ಲಿ ಮಕ್ಕಳ ನಾಟಕ ಶಿಬಿರವನ್ನು 20 ಜಿಲ್ಲೆಗಳಲ್ಲಿ ದಿ. 17–2–2010 ರಿಂದ 20–2 2010 ರವರೆಗೆ ಈ ಕೆಳಗಿನ ಸ್ಥಳಗಳಲ್ಲಿ ನಾಟಕ ಸಂಚಾರ ಶಿಬಿರವನ್ನು ನಡೆಸಲಾಯಿತು.

1.ಬೆಳಗಾಂವ 2.ದ.ಕನ್ನಡ 3.ಚಿಕ್ಕಮಗಳೂರು 4.ಮಂಡ್ಯ 5.ಕೊಪ್ಪಳ 6.ದಾವಣಗೇರಿ 7. ಕೊಪ್ಪಳ 8. ಗದಗ 9. ಧಾರವಾಡ 10. ಉಡುಪಿ 11. ಕೋಲಾರ 12. ಗದಗ

13. ಹೊಸಪೇಟೆ 14. ಮುಧೋಳ 15. ಶಿವಮೊಗ್ಗ 16. ಚಿತ್ರದುರ್ಗ 17. ಉ. ಕನ್ನಡ 18. ಶಿವಮೊಗ್ಗ 19. ಧಾರವಾಡ 20. ಮೈಸೂರ

ಈ ಎಲ್ಲ ಜಿಲ್ಲೆಗಳ ಗ್ರಾಮ ಮಟ್ಟದ ಸರಕಾರಿ ಶಾಲೆಗಳಲ್ಲಿ ನಾಟಕ ಶಿಬಿರ ನಡೆಸಲಾಯಿತು. ಅದರಲ್ಲಿ 2 ಜಿಲ್ಲೆಗಳಲ್ಲಿ ನಡೆದ ನಾಟಕೋತ್ಸವದ ಪಕ್ಷಿನೋಟ. (ಉಡುಪಿ ಮತ್ತು ಮಂಡ್ಯ)











ಮಂಡ್ಯ ಜಿಲ್ಲೆಯ ನಾಗಮಂಗಲ ತಾ. ಹರದನಹಳ್ಳಿ





17. ಮಕ್ಕಳ ಬೇಸಿಗೆ ಶಿಬಿರ

1. ಬೆಳಗಾಂವ ಜಿಲ್ಲಾ ರಾಮದುರ್ಗ ತಾಲೂಕಿನ ಕಲಹಾಳ ಹಾಗೂ ಚಿಕ್ಕೊಪ್ಪ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 100 ಮಕ್ಕಳಿಗೆ ದಿ. 25–4–2010 ರಿಂದ ಒಂದು ವಾರದ ವರೆಗೆ ಬೇಸಿಗೆ ಶಿಬಿರ ಹಮ್ಮಿಕೊಂಡು ಕಾರ್ಯಕ್ರಮ ಯಶಸ್ವಿಗೊಳಿಸಲಾಯಿತು.

2. ಧಾರವಾಡ ಜಿಲ್ಲೆಯ ಪ್ರಶಾಂತ ನಗರದಲ್ಲಿ 'ಸಮುದಾಯ' ಹುಬ್ಬಳ್ಳಿ ಧಾರವಾಡ ಘಟಕ ರಾಷ್ಟ್ರೀಯ ಪ್ರಾದೇಶಿಕ ನಾಟಕ ಶಾಲೆ, ಬೆಂಗಳೂರು ಹಾಗೂ ಕರ್ನಾಟಕ ಬಾಲವಿಕಾಸ ಅಕಾಡೆಮಿ, ಧಾರವಾಡ ಇವರ ಸಂಯುಕ್ತ ಆಶ್ರಯದಲ್ಲಿ ಹಾಗೂ ವಿವಿಧ ಸಂಘ ಸಂಸ್ಥೆಗಳೊಂದಿಗೆ ದಿ. 28–4–2010 ರಿಂದ ಮೇ. 13 ರ ವರೆಗೆ ಬೇಸಿಗೆ ಶಿಬಿರ ಕಾರ್ಯಕ್ರಮ ಜರುಗಿಸಲಾಯಿತು.





3. ಬಳ್ಳಾರಿ ಜಿಲ್ಲೆ ಹೂವಿನ ಹಡಗಲಿಯಲ್ಲಿ ಶ್ರೀಮತಿ ಸೊಪ್ಪಿನ ಕಾಳಮ್ಮ ಬಾಲಕಿಯರ ಪದವಿ ಪೂರ್ವ ಕಾಲೇಜ ಆವರಣದ ಕಾಳಮ್ಮ ಬಡಾವಣೆಯಲ್ಲಿ ದಿ. 16–4–2010 ರಂದು ಬಾಲವಿಕಾಸ ಅಕಾಡೆಮಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಬೇಸಿಗೆ ಶಿಬಿರ ಯಶಸ್ವಿಯಾಗಿ ನಡೆಸಲಾಯಿತು.

ಈ ರೀತಿ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಕರ್ನಾಟಕ ಬಾಲವಿಕಾಸ ಅಕಾಡೆಮಿಯು ಮಕ್ಕಳಲ್ಲಿ ಸುಪ್ತವಾಗಿ ಇರುವ ಪ್ರತಿಭೆಯನ್ನ ಗುರುತಿಸಿ ಪ್ರೋತ್ಸಾಹಿಸುವ ಕಾರ್ಯವನ್ನು ನಿರಂತರವಾಗಿ ಯಶಸ್ವಿಯಾಗಿ ನಡೆಸುವಲ್ಲಿ ದಾಪುಗಾಲನ್ನಿಡುತ್ತಿದೆ.